ಆ) ಈ ಯೋಜನೆಯನ್ನು ಪಿತ ನೀರಾವರಿ ನಿಗಮದಿಂದ 3:93ರ ನಂತರ ಸಣ್ಣ ನೀರಾವರಿ ಇಲಾಖೆಗೆ ಹಸ್ತಾಂತರಿಸಲಾಗಿದ್ದು, ನಂತರ ಅಂದಾಜು ಪಟ್ಟಿ ತಯಾರಿಸಿರುವುದರಿಂದ ಹಾಗೂ ಈ ಯೋಜನೆಗೆ 1993-94ನೇ ಸಾಲಿನಲ್ಲಿ ಸಾಕಷ್ಟು ಅನುದಾನವಿಲ್ಲದಿದ್ದ ಕಾರಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ತಡವಾಗಿದೆ.

ಇ) ಬಂದಿದೆ

ಈ) ಅಂದಾಜಿಗೆ ಅನುಮೋದನೆ ನೀಡಿದ ನಂತರ ಅನುದಾನದ ಲಭ್ಯತೆಯ ಮೇಲೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

ಹುಕ್ಕೇರಿ ತಾಲ್ಲೂಕಿನ ಇಲೆಕ್ಟ್ರಿಕ್ ಸೊಸಾಯಿಟಿಯು ವಿದ್ಯುತ್ ವಿತರಣಾ ಕೇಂದ್ರಕ್ಕೆ ಅರ್ಜಿ ಸಲ್ಲಿಸಿರುವ ಬಗ್ಗೆ

487 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ತಾಲ್ಲೂಕಿನ ಇಲೆಕ್ಟ್ರಿಕ್ ಸೊಸಾಯಿಟಿ ಎಷ್ಟು ವಿದ್ಯುತ್ ವಿತರಣಾ ಕೇಂದ್ರ ಬೇಡಿ ಅರ್ಜಿ ಸಲ್ಲಿಸಿದೆ?

ಆ) ಸಲ್ಲಿಸಿದಲ್ಲಿ ಅವು ಯಾವ ಯಾವುವು ಮತ್ತು ಯಾವಾಗ ಅರ್ಜಿ ಸಲ್ಲಿಸಲಾಗಿದೆ?

ಇ) ಅಲ್ಲಿ ವಿತರಣಾ ಕೇಂದ್ರ ಮಂಜೂರಾತಿ ಕೊಡದೇ ಇರ ಕಾರಣವೇನು?

ಈ) ಅಲ್ಲಿ ವಿತರಣಾ ಕೇಂದ್ರಗಳಲ್ಲದೇ ರೈತರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಬಂದಿದ್ದಲ್ಲಿ ಮಂಜೂರಾತಿ ಕೊಟ್ಟು ಸರಿಪಡಿಸಲಾಗುವುದೇ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಮೂರು ವಿದ್ಯುತ್ ಉಪಕೇಂದ್ರಗಳನ್ನು ಬೇಡಿ ಅರ್ಜಿ ಸಲ್ಲಿಸಿದೆ

ಆ) ಅವು ಯಾವುವೆಂದರೆ ಹಿಡಕಲ ಗ್ರಾಮವಲ್ಲಿ 110:11 ಕೆ.ವಿ. ವಿದ್ಯುತ್ ಉಪಕೇಂದ್ರ ಕಣಗಲ್ ಮತ್ತು ಗುಡಾಸ್ ಗ್ರಾಮಗಳಲ್ಲಿ ತಲಾ 33:11 ಕೆ.ವಿ. ವಿದ್ಯುತ್ ಉಪಕೇಂದ್ರಗಳು ಈ ವಿದ್ಯುತ್ ಉಪಕೇಂದ್ರಗಳ ನಿರ್ಮಾಣಕ್ಕೆ ಮನವಿಯನ್ನು ಹುಕ್ಕೇರಿ ತಾಲ್ಲೂಕು ಗ್ರಾಮೀಣ ವಿದ್ಯುತ್ ಸಹಕಾರ ಸಂಘವು ದಿಸೆಂಬರ್ 92ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಸಲ್ಲಿಸಿದೆ.

ಇ) ಪ್ರಸ್ತಾವನೆಗಳು ಮಂಡಳಿಯ ಪರಿಶೀಲನೆಯಲ್ಲಿವೆ. ಆದರೆ ಸದರೀ ಹುಕ್ಕೇರಿ ತಾಲ್ಲೂಕು ಗ್ರಾಮೀಣ ವಿದ್ಯುತ್ ಸಹಕಾರ ಸಂಘವು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಸುಮಾರು 11ಕೋಟಿ ರೂ.ಗಳ ಬೃಹತ್ ಪ್ರಮಾಣದ ಬಾಕಿಯನ್ನು ನೀಡಬೇಕಾಗಿರುವುದರಿಂದ, ಆರ್ಥಿಕ ಮುಗ್ಗಟ್ಟಿನ ಪರಿಸ್ಥಿತಿ ಉಂಟಾಗಿದೆ.

ಈ) ಹೌದು

ಉ) ಪ್ರಸ್ತಾವನೆ ಬಂದಾಗ ಸರ್ಕಾರ ಇದನ್ನು ಸೂಕ್ತವಾಗಿ ಪರಿಶೀಲಿಸಲಾಗುವುದು